CLICK HERE TO DOWNLOAD ANNEXURE FOR THIS ANSWER

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 949 |
| ಸದಸ್ಯರ ಹೆಸರು: | ಶ್ರೀ ಕಿಶೋರ್ ಕುಮಾರ್ ಪುತ್ತೂರ್ |
| ಉತ್ತರಿಸಬೇಕಾದ ದಿನಾಂಕ: | 11.03.2026 |
| ಉತ್ತರಿಸಬೇಕಾದ ಸಚಿವರು: | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಜರಾಯಿ ಇಲಾಖೆಯ ಅಡಿಯಲ್ಲಿ ಎಷ್ಟು ದೇವಾಲಯಗಳು ಇವೆ; ಯಾವುವು; ಅವುಗಳಲ್ಲಿ ಎಷ್ಟು 'ಎ' 'ಬಿ' 'ಸಿ' ವರ್ಗದ ದೇವಾಲಯಗಳು ಇವೆ; ಕಳೆದ ಮೂರು ವರ್ಷಗಳಲ್ಲಿನ ದೇವಾಲಯಗಳ ಒಟ್ಟು ಆದಾಯ ಮತ್ತು ವೆಚ್ಚದ ವಿವರವೇನು; ಪಾರದರ್ಶಕತೆಗಾಗಿ ಲೆಕ್ಕಪತ್ರಗಳ ಆನ್‌ಲೈನ್ ಪ್ರಕಟಣೆ ಮಾಡಲಾಗಿದೆಯೇ; (ವಿವರ ನೀಡುವುದು) | ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ರಾಜ್ಯದ ಒಟ್ಟು 34566 ದೇವಸ್ಥಾನಗಳು ಒಳಪಟ್ಟಿರುತ್ತವೆ. ದೇವಾಲಯಗಳ ವಿವರಗಳನ್ನು **ಪೆನ್ ಡ್ರೈವ್**‌ನಲ್ಲಿ ಒದಗಿಸಿದೆ.<br><br>ಇಲಾಖಾ ದೇವಸ್ಥಾನಗಳನ್ನು ಆಯಾ ದೇವಾಲಯಗಳ ಆದಾಯಕ್ಕನುಗುಣವಾಗಿ ಪ್ರವರ್ಗ 'ಎ', 'ಬಿ' ಮತ್ತು 'ಸಿ' ದೇವಾಲಯಗಳೆಂದು ವರ್ಗೀಕರಿಸಲಾಗಿದೆ. |

| ಪ್ರವರ್ಗ | ವಿವರ | ಸಂಸ್ಥೆಗಳ ಸಂಖ್ಯೆ |
|---|---|---|
| ಎ | ವಾರ್ಷಿಕ ವರಮಾನವು ರೂ. ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು | 205 |
| ಬಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರಿ ರೂ. ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು | 193 |
| ಸಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು | 34168 |
| **ಒಟ್ಟು** | | **34566** |

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಪ್ರವರ್ಗ 'ಎ' ಮತ್ತು 'ಬಿ' ಸಂಸ್ಥೆಗಳಿಂದ ಸಂಗ್ರಹವಾಗಿರುವ ವಾರ್ಷಿಕ ಆದಾಯ ವಿವರ ಕೆಳಕಂಡಂತಿದೆ.

| ಕ್ರ. ಸಂ | ವರ್ಷ | ಪ್ರವರ್ಗ 'ಎ' | | ಪ್ರವರ್ಗ "ಬಿ' | |
|---|---|---|---|---|---|
| | | ಆದಾಯ | ವೆಚ್ಚ | ಆದಾಯ | ವೆಚ್ಚ |
| | | | | | ರೂ.ಲಕ್ಷಗಳಲ್ಲಿ |
| 1. | 2022-23 | 67523.31 | 51338.51 | 3222.42 | 2404.82 |
| 2. | 2023-24 | 74391.68 | 55084.61 | 3446.19 | 2447.57 |
| 3. | 2024-25 | 81875.03 | 58276.71 | 3831.60 | 2715.47 |
| | ಒಟ್ಟು | 223790.02 | 164699.83 | 10500.21 | 7567.86 |

(ದೇವಾಲಯವಾರು ಆದಾಯ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಿದೆ) ( ಪೆನ್‌ಡ್ರೈವ್)

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಒಟ್ಟು 25171 ಪ್ರವರ್ಗ 'ಸಿ' ದೇವಾಲಯಗಳಿಗೆ ವಾರ್ಷಿಕ ರೂ.72,000/-ಗಳ ತಸ್ತೀಕ್ ಮೊತ್ತವನ್ನು ಹಾಗೂ ತಸ್ತೀಕ್ ಪಡೆಯದೇ ಇರುವ ಒಟ್ಟು 3721 ದೇವಾಲಯಗಳಿಗೆ ವಾರ್ಷಿಕ ರೂ.72,000/-ಗಳ ವರ್ಷಾಸನವನ್ನು ನೀಡಲಾಗುತ್ತಿದ್ದು, ಇದು ಆ ದೇವಾಲಯಗಳ ವಾರ್ಷಿಕ ಆದಾಯವಾಗಿರುತ್ತದೆ.<br><br>ಮುಂದುವರೆದು, 1)ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002 ನಿಯಮ 36(1) ಸಂಸ್ಥೆಯ ಒಟ್ಟು ವಾರ್ಷಿಕ ಆದಾಯವು ಐದು ಲಕ್ಷ ರೂಪಾಯಿಗಳು ಮತ್ತು ಹೆಚ್ಚು ಇರುವ ಸಂದರ್ಭದಲ್ಲಿ ಸಂಸ್ಥೆಯ ಲೆಕ್ಕ ಪತ್ರಗಳ ವಾರ್ಷಿಕ ಲೆಕ್ಕಪರಿಶೋಧನೆಯನ್ನು ರಾಜ್ಯ ಲೆಕ್ಕ ಪತ್ರಗಳ ಇಲಾಖೆಯಿಂದ ನಡೆಸತಕ್ಕದ್ದು ಮತ್ತು ಅಂಥ ಸಂಸ್ಥೆಗೆ ಯಾವುದೇ ಲೆಕ್ಕ ಪರಿಶೋಧನಾ ಶುಲ್ಕವನ್ನು ವಿಧಿಸತಕ್ಕದ್ದಲ್ಲ.<br><br>(2) ವಾರ್ಷಿಕ ವರಮಾನವು [ಒಂದು ಲಕ್ಷ ರೂಪಾಯಿಗಳನ್ನು ಮೀರಿದ್ದು ಆದರೆ ಐದು ಲಕ್ಷ ರೂಪಾಯಿಗಳನ್ನು ಮೀರದ ಸಂಸ್ಥೆಯ ಲೆಕ್ಕಪತ್ರಗಳನ್ನು, ಖಾಸಗಿ ಲೆಕ್ಕಪರಿಶೋಧಕರು ಅಥವಾ ಚಾರ್ಟೆಡ್ ಅಕೌಂಟೆಂಟ್ ಮೂಲಕ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಮತ್ತು ಲೆಕ್ಕಪರಿಶೋಧನಾ ಶುಲ್ಕವನ್ನು ವರಮಾನದ ಶೇಕಡಾ ಎರಡರ ದರದಲ್ಲಿ ಸಂದಾಯ ಮಾಡತಕ್ಕದ್ದು.<br>(3) ವಾರ್ಷಿಕ ವರಮಾನವು [ಒಂದು ಲಕ್ಷ ರೂಪಾಯಿ]ಗಳನ್ನು ಮೀರದ ಸಂಸ್ಥೆಯ ಲೆಕ್ಕಪತ್ರಗಳನ್ನು, ಈ ಉದ್ದೇಶಕ್ಕಾಗಿ ಆಯುಕ್ತರು ಅಥವಾ ಇನ್ಸ್‌ಪೆಕ್ಟರು ನೇಮಕ ಮಾಡಿದ ಲೆಕ್ಕಪರಿಶೋಧಕನಿಂದ ಲೆಕ್ಕಪರಿಶೋಧನೆ ಮಾಡಿಸಬಹುದು ಮತ್ತು ಲೆಕ್ಕಪರಿಶೋಧನಾ ಶುಲ್ಕವನ್ನು ವಿಧಿಸತಕ್ಕದ್ದಲ್ಲ- ಎಂದಿರುತ್ತದೆ.<br>ಇಲಾಖೆಯ ಕಾಯ್ದೆ ಮತ್ತು ನಿಯಮಗಳಲ್ಲಿ ಲೆಕ್ಕ ಪತ್ರಗಳ ಆನ್‌ಲೈನ್ ಪ್ರಕಟಣೆಯನ್ನು ಮಾಡುವ ಬಗ್ಗೆ ಉಲ್ಲೇಖಿಸಿರುವುದಿಲ್ಲ. ಆದರೆ ಇಲಾಖೆಯಲ್ಲಿ ಪಾರದರ್ಶಕವಾಗಿ ಲೆಕ್ಕಪತ್ರಗಳನ್ನು ನಿರ್ವಹಿಸಲಾಗುತ್ತಿದೆ. |
| ಆ) | 2023-24ರ ನಂತರ ಎಷ್ಟು ದೇವಾಲಯಗಳ ಅಭಿವೃದ್ಧಿ ಅನುದಾನ ಬಿಡುಗಡೆಗೊಳಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | 2023-24 ರಿಂದ 2025-26ನೇ ಸಾಲಿನ ತಹಲ್ ವರೆವಿಗು 5682 ದೇವಾಲಯಗಳ ಅಭಿವೃದ್ಧಿಗೆ ರೂ.35906.72 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. |

| ವರ್ಷ | ಸಂಸ್ಥೆಗಳ ಸಂಖ್ಯೆ | ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|
| 2023-24 | 1261 | 8775.00 |
| 2024-25 | 3625 | 22962.04 |
| 2025-26 (ತಹಲ್‌ವರೆವಿಗೆ) | 796 | 4169.68 |
| **ಒಟ್ಟು** | **5682** | **35906.72** |

ಜಿಲ್ಲಾವಾರು ಬಿಡುಗಡೆಯಾದ ಅನುದಾನದ ವಿವರವನ್ನು **ಅನುಬಂಧ-2ರಲ್ಲಿ** ಒದಗಿಸಿದೆ. (ಪೆನ್‌ಡ್ರೈವ್)

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಯಾವೆಲ್ಲ ದೇವಾಲಯಗಳಲ್ಲಿ ವಿವಿಧ ಸೇವೆಗಳಿಗೆ ಎಷ್ಟು ಬಾರಿ ಶುಲ್ಕವನ್ನು ಹೆಚ್ಚಿಸಲಾಗಿದೆ; ಎಷ್ಟು ಹೆಚ್ಚಳ ಮಾಡಲಾಗಿದೆ; (ವಿವರ ನೀಡುವುದು)</td><td>ಆಯಾಯ ದೇವಾಲಯದ ರೂಢಿ ಸಂಪ್ರದಾಯಕ್ಕೆ ಅನುಗುಣವಾಗಿ ಸಂಬಂಧಿಸಿದ ಸೇವಾರ್ಥಗಳ ಸೇವೆಗಳಿಗೆ ವಿನಿಯೋಗಿಸುವ ದ್ರವ್ಯ/ಪದಾರ್ಥಗಳ ಅಳತೆ ಪ್ರಮಾಣಗಳಿಗನುಸಾರವಾಗಿ ಹಾಗೂ ಪ್ರಸ್ತುತ ಮಾರುಕಟ್ಟೆ ಧಾರಣೆಗಳನ್ನು ಪರಿಗಣಿಸಿ ಸೇವಾದರಗಳನ್ನು ಪರಿಷ್ಕರಿಸಲಾಗುತ್ತಿದೆ.<br><br>ಕಳೆದ ಆರು ವರ್ಷಗಳಲ್ಲಿ, ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ದೇವಾಲಯಗಳ ಸೇವಾ ದರಗಳನ್ನು ಪರಿಷ್ಕರಿಸಿದ ಪಟ್ಟಿಯನ್ನು ಅನುಬಂಧ-3ರಲ್ಲಿ ಒದಗಿಸಿದೆ. (ಪೆನ್‌ಡ್ರೈವ್)</td></tr>
<tr><td>ಈ)</td><td>ದೇವಾಲಯಗಳ ಜಮೀನು ಮತ್ತು ಆಸ್ತಿಗಳ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಇದುವರೆಗೆ ಎಷ್ಟು ಎಕರೆ ಭೂಮಿಯನ್ನು ವಶಕ್ಕೆ ಪಡೆಯಲಾಗಿದೆ; (ದೇವಾಲಯವಾರು ವಿವರ ನೀಡುವುದು).</td><td>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ/ಛತ್ರಗಳ ಜಮೀನು ಹಾಗೂ ಇತರ ಆಸ್ತಿಗಳ ಸಂರಕ್ಷಣೆಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅ.ಸ.ಪತ್ರ ಸಂ:1265/2020, ದಿನಾಂಕ:11.12.2020 ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಿ ದೇವಾಲಯದ ಜಮೀನುಗಳನ್ನು ಆದ್ಯತೆ ಮೇರೆಗೆ ಅಳತೆ ಮಾಡಿ ನಕ್ಷೆ ತಯಾರಿಸಲು ಹಾಗೂ ಕನಿಷ್ಠ ತಿಂಗಳಿಗೆ ಒಂದು ತಾಲ್ಲೂಕಿನಲ್ಲಿ 5 ದೇವಾಲಯಗಳ ಆಸ್ತಿಯನ್ನು ಸರ್ವೆ ಮಾಡಿ ದಾಖಲೀಕರಣಗೊಳಿಸಿ ವರದಿಯನ್ನು ಸಲ್ಲಿಸಲು ಸಹಾಯಕ ದತ್ತಿ ಸಮೀಕ್ಷಾಧಿಕಾರಿಗಳಾಗಿರುವ ಭೂದಾಖಲೆಗಳ ಉಪ ನಿರ್ದೇಶಕರಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ ಕಂಇ.49 ಮುಅಬಿ 2021 ದಿನಾಂಕ: 05-09-2022ರ ಅನ್ವಯ ಮುಜರಾಯಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳ ಜಮೀನುಗಳ ಸಂರಕ್ಷಣೆಗೆ ಮೊದಲ ಹಂತದಲ್ಲಿ ಎಲ್ಲಾ "ಎ ಮತ್ತು "ಬಿ" ಶ್ರೇಣಿಯ ಹಾಗೂ ಮಹಾನಗರ ಪಾಲಿಕೆ/ ನಗರ ಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿರುವ "ಸಿ" ಶ್ರೇಣಿಯ ಮುಜರಾಯಿ ಆಸ್ತಿಗಳ ಬಾಬ್ತು ಹಕ್ಕು ದಾಖಲೆಗಳ ಇಂಡೀಕರಣ, ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆ ಇತ್ಯಾದಿ ಕೆಲಸಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿರುತ್ತದೆ. ಅಲ್ಲದೇ ಈ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಲು ಈ ಕೆಳಕಂಡ ರಾಜ್ಯಮಟ್ಟದ/ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ.<br><br>ರಾಜ್ಯ ಮಟ್ಟದ ಸಮಿತಿ<br><br>
<table>
<tr><td>1.</td><td>ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ,</td><td>ಅಧ್ಯಕ್ಷರು</td></tr>
<tr><td>2.</td><td>ಆಯುಕ್ತರು, ಭೂ ಮಾಪನ ಇಲಾಖೆ.</td><td>ಸದಸ್ಯರು</td></tr>
<tr><td>3.</td><td>ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ</td><td>ಸದಸ್ಯರು</td></tr>
<tr><td>4.</td><td>ಜಂಟಿ ನಿರ್ದೇಶಕರು, ಭೂ ಮಾಪನ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.</td><td>ಸದಸ್ಯ ಕಾರ್ಯದರ್ಶಿ</td></tr>
</table></td></tr>
</table>

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
ಜಿಲ್ಲಾ ಮಟ್ಟದ ಸಮಿತಿ
<table>
<tr><td>1</td><td>ಜಿಲ್ಲಾಧಿಕಾರಿ</td><td>ಅಧ್ಯಕ್ಷರು</td></tr>
<tr><td>2.</td><td>ಅಪರ ಜಿಲ್ಲಾಧಿಕಾರಿ</td><td>ಸದಸ್ಯರು</td></tr>
<tr><td>3.</td><td>ಉಪ ವಿಭಾಗಾಧಿಕಾರಿ</td><td>ಸದಸ್ಯರು</td></tr>
<tr><td>4.</td><td>ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ದಿ ಕೋಶ ಸ್ಥಳೀಯ ಸಂಸ್ಥೆ ಕೋಶ (ಸ್ಥಳೀಯ ಸಂಸ್ಥೆ)</td><td>ಸದಸ್ಯರು</td></tr>
<tr><td>5.</td><td>ತಾಂತ್ರಿಕ ಸಹಾಯಕರು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರು</td><td>ಸದಸ್ಯ ಕಾರ್ಯದರ್ಶಿ</td></tr>
</table>
<br>
ಸರ್ಕಾರದ ಮೇಲ್ಕಂಡ ಆದೇಶಗಳಂತೆ ರಾಜ್ಯದ ದೇವಾಲಯ ಮತ್ತು ದೇವಾಲಯಗಳಿಗೆ ಸೇರಿದ ಆಸ್ತಿ ಸಂರಕ್ಷಣೆ ಹಾಗೂ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.
<ol>
<li>ಈವರೆವಿಗೆ ರಾಜ್ಯದಲ್ಲಿ 19,020 ಅಧಿಸೂಚಿತ ಮುಜರಾಯಿ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಳತೆಯಾಗಿರುತ್ತದೆ. (ವಿವರವನ್ನು ಅನುಬಂಧ-4ರಲ್ಲಿ ಒದಗಿಸಿದೆ) (ಶೇನ್‌ಕ್ರೀನ್)</li>
<li>ಒಟ್ಟು 20,730 ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳನ್ನು ಖಾತೆ ಮಾಡಿಸಲು ಕ್ರಮವಹಿಸಲಾಗಿದೆ. (ವಿವರವನ್ನು ಅನುಬಂಧ-5ರಲ್ಲಿ ಒದಗಿಸಿದೆ)(ಶೇನ್‌ಕ್ರೀನ್)</li>
<li>ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಕ್ರಮ ಪರಭಾರೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ದೇವಾಲಯಗಳ ಸ್ವತ್ತುಗಳ ಪಹಣಿಗಳಲ್ಲಿ ಹಾಗೂ ಖಾತೆಗಳಲ್ಲಿ "ದೇವಾಲಯದ ಹೆಸರು, ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಸರ್ಕಾರ" ಎಂದು ಇಂಡೀಕರಿಸಲು ಕ್ರಮವಹಿಸಲಾಗಿದೆ.</li>
<li>ಈವರೆವಿಗೆ ಅಧಿಸೂಚಿತ ದೇವಸ್ಥಾನಗಳ ಒಟ್ಟು 309.32 ಎಕರೆ-ಗುಂಟೆ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಗಿದ. (ವಿವರವನ್ನು ಅನುಬಂಧ-6 ರಲ್ಲಿ ಒದಗಿಸಿದೆ) (ಶೇನ್‌ಕ್ರೀನ್)</li>
<li>ಅಧಿಸೂಚಿತ ದೇವಾಲಯಗಳ ಜಮೀನುಗಳ ಸಂರಕ್ಷಣೆಗಾಗಿ ಕೆಲವು ಕಡೆ ಬೇಲಿಗಳನ್ನು ನಿರ್ಮಿಸಲಾಗಿದೆ ಎಲ್ಲಾ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ ನಿಖರ ಮಾಹಿತಿಗಾಗಿ ಜಿಯೋ ಫೆನ್ಸಿಂಗ್ ಮಾಡಿಸಲು ಪರಿಶೀಲಿಸಲಾಗುತ್ತಿದೆ.</li>
<li>ಒಟ್ಟು 1800 ಅಧಿಸೂಚಿತ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಸ್ವತ್ತುಗಳನ್ನು ಕಾಯ್ದೆಯ ಕಲಂ 31(7)ರಡಿಯಲ್ಲಿ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. (ವಿವರವನ್ನು ಅನುಬಂಧ-7 ರಲ್ಲಿ ಒದಗಿಸಿದೆ) (ಶೇನ್‌ಕ್ರೀನ್)</li>
</ol>
</td></tr>
<tr><td>ಉ)</td><td>ಗ್ರಾಮೀಣ ಭಾಗದ ಸಣ್ಣ ದೇವಾಲಯಗಳಿಗೆ ಶೌಚಾಲಯ, ಕುಡಿಯುವ ನೀರು ವಸತಿ ಮುಂತಾದ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ</td><td>ಧಾರ್ಮಿಕ ದತ್ತಿ ಆಯುಕ್ತರ ಸುತ್ತೋಲೆ ಸಂಖ್ಯೆ: ಸಿಎನ್‌ಆರ್/1/ಸಿಆರ್/346/2010-11 ದಿನಾಂಕ: 22.03.2011 ರಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಿಗೆ ಬರುವ ಭಕ್ತಾಧಿಗಳ/ ಸಾರ್ವಜನಿಕರ ಅನುಕೂಲಕ್ಕಾಗಿ 32 ಅಂಶಗಳ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸೂಚನೆಯನ್ನು ನೀಡಲಾಗಿರುತ್ತದೆ. ಅದರಂತೆ</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಅನುದಾನ ನೀಡುವ ಬಗ್ಗೆ ಸರ್ಕಾರದ ಯೋಜನೆ ಏನು; ಹುಂಡಿ ಹಣದ ಪಾರದರ್ಶಕ ಎಣಿಕೆ ಮತ್ತು ಬಳಕೆಗೆ ಸಿಸಿಟಿವಿ ಹಾಗೂ ಡಿಜಿಟಲ್ ಮಾನಿಟರಿಂಗ್ ವ್ಯವಸ್ಥೆ<br>ಜಾರಿಗೊಳಿಸಲಾಗಿದೆಯೇ; | ದೇವಾಲಯಗಳಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿರುತ್ತದೆ.<br>1. ದೇವಾಲಯದಲ್ಲಿ ಮಾರ್ಗದರ್ಶನ ನೀಡುವ ಫಲಕಗಳನ್ನು ಅಳವಡಿಸಲಾಗಿರುತ್ತದೆ.<br>2. ದೇವಾಲಯಕ್ಕೆ ಭೇಟಿ ನೀಡುವ ಹಿರಿಯ ನಾಗರೀಕರು ಮತ್ತು ಕುಟುಂಬಗಳು ವಿಶ್ರಮಿಸಲು ಆಸನದ ವ್ಯವಸ್ಥೆ.<br>3. ದೇವಾಲಯಕ್ಕೆ ಬರುವ ಭಕ್ತಾಧಿಗಳಿಗೆ ನೆರಳಿನ ವ್ಯವಸ್ಥೆ.<br>4. ದೇವಾಲಯಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ (RO Plant)<br>5. ಶೌಚಾಲಯಗಳ ವ್ಯವಸ್ಥೆ.<br>6. ದೇವಾಲಯಗಳಲ್ಲಿ CC TV ಗಳ ಅಳವಡಿಕೆ.<br>7. ವಿಶೇಷ ಚೇತನರು ಹಾಗೂ ಹಿರಿಯ ನಾಗರೀಕರಿಗೆ ಪ್ರತ್ಯೇಕ ಸರದಿ ಸಾಲಿನಲ್ಲಿ ನೇರ ದರ್ಶನ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.<br>8. ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಲ್ಲಿ ತಾಯಂದಿರು ಹಾಲುಣಿಸಲು ಪ್ರತ್ಯೇಕ ಕೊಠಡಿ ವ್ಯವಸ್ಥೆ ಹಾಗೂ ಒಂದು ವರ್ಷದೊಳಗಿನ ಚಿಕ್ಕ ಮಕ್ಕಳಿರುವ ತಾಯಂದಿರಿಗೆ ನೇರ ದರ್ಶನದ ವ್ಯವಸ್ಥೆ.<br><br>ಇದಲ್ಲದೇ, ದೇವಾಲಯಗಳ ಸ್ವಚ್ಛತೆ ಮತ್ತು ಕ್ಷೇತ್ರದ ಪಾವಿತ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ 2025ರ ಆಗಸ್ಟ್ 15ನೇ ತಾರೀಖಿನಿಂದ ಅನ್ವಯವಾಗುವಂತೆ ಸಂಪೂರ್ಣವಾಗಿ ಪ್ಲಾಸ್ಟಿಕ್ ನಿಷೇಧವನ್ನು ಜಾರಿಗೆ ತರಲು ಇಲಾಖೆಯ ಎಲ್ಲಾ ಅಧಿಸೂಚಿತ ದೇವಾಲಯಗಳಿಗೆ ಸೂಚನೆ ನೀಡಲಾಗಿದೆ.<br><br>ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳು, ಪೂಜಾ ಸ್ಥಳಗಳ ದುರಸ್ತಿ/ ಜೀರ್ಣೋದ್ಧಾರ ಹಾಗೂ ನವನಿರ್ಮಾಣ ಉದ್ದೇಶಕ್ಕಾಗಿ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 103 ಮುಅಬಿ 2020 ದಿ: 28.05.2025ರನ್ವಯ ಲೆಕ್ಕ ಶೀರ್ಷಿಕೆ: "2250-00-103-5-12 (200) ದೇವಾಲಯಗಳ ಮತ್ತು ಇತರೆ ಧಾರ್ಮಿಕ ಸಂಸ್ಥೆಗಳ-ಸಹಾಯಾನುದಾನ ಸಾಮಾನ್ಯ" ಇದರಡಿಯಲ್ಲಿ ಅವಕಾಶ ಕಲ್ಪಿಸಲಾದಂತೆ ಧಾರ್ಮಿಕ ದತ್ತಿ ಇಲಾಖಾ ದೇವಾಲಯಗಳಿಗೆ ಅಗತ್ಯವಿರುವ ಶೌಚಾಲಯ, ಕುಡಿಯುವ ನೀರು, ವಸತಿ ಮುಂತಾದ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಲಾಗುತ್ತಿದೆ.<br><br>ಅದರಂತೆ, ಪ್ರಸಕ್ತ ಸಾಲಿನಲ್ಲಿ ರೂ.190.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>ಹುಂಡಿ ಹಣದ ಪಾರದರ್ಶಕ ಎಣಿಕೆ ಮತ್ತು ಬಳಕೆಗೆ ಸಿಸಿಟಿವಿ ಅಳವಡಿಸಲಾಗುತ್ತದೆ ಹಾಗೂ ಸಾರ್ವಜನಿಕ ಭಕ್ತಾದಿಗಳ ಸಮ್ಮುಖದಲ್ಲಿ ಹುಂಡಿ ಎಣಿಕೆ ಕಾರ್ಯವನ್ನು ಪಾರದರ್ಶಕವಾಗಿ ನಡೆಸಲಾಗುತ್ತದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಊ)</td><td>ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು; ಸದರಿ ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ</td><td>ಧಾರ್ಮಿಕ ದತ್ತಿ ಇಲಾಖೆಯಲ್ಲಿ ಮಂಜೂರಾಗಿರುವ, ಖಾಲಿಯಿರುವ ಹುದ್ದೆಗಳ ವಿವರ ಕೆಳಗಿನಂತಿವೆ.
<table>
<tr><th>ವೃಂದ</th><th>ಮಂಜೂರಾದ ಹುದ್ದೆಗಳ ಸಂಖ್ಯೆ</th><th>ಭರ್ತಿಯಾದ ಹುದ್ದೆಗಳ ಸಂಖ್ಯೆ</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>ಐ.ಎ.ಎಸ್</td><td>1</td><td>1</td><td>0</td></tr>
<tr><td>ಸಮೂಹ ಎ (ಹಿರಿಯ ಶ್ರೇಣಿ)</td><td>12</td><td>7</td><td>5</td></tr>
<tr><td>ಸಮೂಹ ಎ (ಕಿರಿಯ ಶ್ರೇಣಿ)</td><td>30</td><td>22</td><td>8</td></tr>
<tr><td>ಸಮೂಹ ಬಿ</td><td>66</td><td>33</td><td>33</td></tr>
<tr><td>ಸಮೂಹ ಸಿ</td><td>317</td><td>174</td><td>143</td></tr>
<tr><td>ಸಮೂಹ ಡಿ</td><td>65</td><td>15</td><td>50</td></tr>
<tr><td>ಒಟ್ಟು</td><td>492</td><td>252</td><td>240</td></tr>
</table>
ಧಾರ್ಮಿಕ ದತ್ತಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಕ್ರಮವಹಿಸಲಾಗುತ್ತಿದ್ದು, ಪರಿಷ್ಕೃತ ನಿಯಮಗಳಂತೆ ಇಲಾಖೆಯಲ್ಲಿ ಖಾಲಿಯಿರುವ ಮೇಲ್ಕಂಡ ಹುದ್ದೆಗಳನ್ನು ನೇರ ನೇಮಕಾತಿ/ಪದೋನ್ನತಿ ಮೂಲಕ ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದೆ.</td></tr>
<tr><td>ಋ)</td><td>ದೇವಾಲಯಗಳ ಆಸ್ತಿ ಮತ್ತು ಆದಾಯ ಸಂಪೂರ್ಣ ಡಿಜಿಟಲೀಕರಣ ಹಾಗೂ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವಂತೆ ಪೋರ್ಟಲ್ ವ್ಯವಸ್ಥೆ ರೂಪಿಸಲು ಸರ್ಕಾರದ ಕಾರ್ಯ ಯೋಜನೆ ಏನು; ರಾಜ್ಯ ಧಾರ್ಮಿಕ ಸಂಸ್ಥೆಗಳ ಸುವ್ಯವಸ್ಥಿತ ನಿರ್ವಹಣೆ ಪಾರದರ್ಶಕತೆ ಮತ್ತು ಭಕ್ತರಿಗೆ ಸೌಲಭ್ಯಗಳನ್ನು ಹೆಚ್ಚಿಸಲು ಸಮಗ್ರ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಸರ್ಕಾರದ ನಿಲುವೇನು?</td><td>ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 31ರಡಿಯಲ್ಲಿ ಎಲ್ಲಾ ಆಸ್ತಿ ವಿವರಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕಾಗಿರುತ್ತದೆ. ಪ್ರಸ್ತುತ ರಾಜ್ಯದ ಮುಜರಾಯಿ ದೇವಾಲಯಗಳ ಆಸ್ತಿಗಳ ಸರ್ವೆ ಕಾರ್ಯವು ಪ್ರಗತಿಯಲ್ಲಿರುತ್ತದೆ. ಸದರಿ ಸರ್ವೆ ಕಾರ್ಯ ಪೂರ್ಣಗೊಳಿಸಿದ ಡಿಜಿಟಲೀಕರಣ ಹಾಗೂ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವಂತೆ ಇಲಾಖಾ ಪೋರ್ಟಲ್ ನಲ್ಲಿ ಪ್ರಕಟಿಸಲು ಪರಿಶೀಲಿಸಲಾಗುವುದು.<br><br>ಪ್ರಸ್ತುತ 42 ದೇವಾಲಯಗಳ ಆದಾಯ ಮೂಲವಾದ ಸೇವೆಗಳು, ಕೊಠಡಿಗಳ ಕಾಯ್ದಿರಿಸುವಿಕೆ ಮತ್ತು ದೇಣಿಗೆ ಹಾಗೂ ದೇವಾಲಯಗಳ ಮಾಹಿತಿಗಳನ್ನು https:itms.kar.nic.in ರಲ್ಲಿ ಪಾರದರ್ಶಕವಾಗಿ ಜಾರಿಗೆ ತರಲಾಗಿರುತ್ತದೆ. ಉಳಿದ ದೇವಾಲಯಗಳಲ್ಲಿ ಹಂತ ಹಂತವಾಗಿ ಸದರಿ ವ್ಯವಸ್ಥೆಗಳನ್ನು ಜಾರಿಗೆ ತರುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ.<br><br>ಭಕ್ತರಿಗೆ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ತೆಗೆದು ಕೊಂಡಿರುವ ಸುಧಾರಣೆಗಳ ಬಗ್ಗೆ ಉಪ ಪ್ರಶ್ನೆ (ಉ)ರಲ್ಲಿ ಉತ್ತರ ನೀಡಲಾಗಿದೆ.</td></tr>
</table>

ಸಂಖ್ಯೆ:ಕಂಇ 49 ಮುಸಪ್ರ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು